ಹುಟ್ಟಿಸುತ್ತಿತ್ತು. ಈ ಕುರಿತು ರಮಾಗೆ ಬರೆಯುತ್ತಾರೆ:

‘ಭಾರತದ ಚುನಾವಣೆಯ ಸಂದರ್ಭದಲ್ಲಿ ರಾಜಕೀಯ ವಿಚಾರ ಅಥವಾ ವಾದಗಳ ಚರ್ಚೆಗೆ ಅವಕಾಶವಿಲ್ಲ. ಪ್ರಪಂಚದ ಎಲ್ಲಾ ಕಡೆಯೂ ಹೀಗಿದೆಯೆ? ಇಲ್ಲಿಯ ಹಾಗೆ ಬೇರೆಲ್ಲಿಯೂ ಇರಲಾರದು. ಜಾತೀಯ ಗುಂಪಿನ ಮತಗಳು; ತಮ್ಮ ಮುಖಂಡನೆಂದು ಒಬ್ಬನನ್ನೇ ಒಪ್ಪಿಕೊಂಡಿರುವ ಮಧ್ಯಮ ವರ್ಗದ ವಿಚಿತ್ರ ಸ್ವಭಾವ; ಭಾರತೀಯ ಪತ್ರಿಕೆಗಳು ತೋರಿಸುವ ಸಂಪೂರ್ಣ ಉದಾಸೀನ... ಇವೆಲ್ಲ ರಾಜಕೀಯ ಚರ್ಚೆಗಳಲ್ಲಿ ಸ್ಥಗಿತತೆ ಉಂಟುಮಾಡಿವೆ. ಇಲ್ಲಿ ಯಾರು ಏನು ಮಾಡಿದರೂ ನಡೆದೀತು ಎಂಬಂತಿದೆ.’

ರಾಜಕೀಯ ಪಕ್ಷಗಳು, ಅದರಲ್ಲೂ ‘ಸ್ವತಂತ್ರ ಪಾರ್ಟಿ’ ಮುಂತಾದ ವಿರೋಧ ಪಕ್ಷಗಳೇ ಆಗಾಗ ಸಮಾಜವಾದಿಗಳ ಸಭೆಗೆ ತೊಂದರೆ ಮಾಡುವುದು, ಕಲ್ಲೆಸೆಯುವುದು ಕೂಡ ನಡೆಯುತ್ತಿತ್ತು. ‘ಹಣ ಮತ್ತು ಜನಬಲ ಇಲ್ಲದೆ ಒಂದು ದೊಡ್ಡ ದೇಶವನ್ನು ಸಂಘಟಿಸುವುದು ಅತಿ ಸಾಹಸದ ಕೆಲಸ’ ಎಂಬುದು ಹೆಜ್ಜೆಹೆಜ್ಜೆಗೂ ಲೋಹಿಯಾರಿಗೆ ಮನವರಿಕೆಯಾಗತೊಡಗಿತು. ಸ್ವಾತಂತ್ರ್ಯ ಚಳುವಳಿಯ ಕಾಲದಂತೆ ಜನರು ಒಂದು ಮಹತ್ವದ ಕೆಲಸ ಮಾಡಲು ಒಟ್ಟಾಗಿ ಮುನ್ನುಗ್ಗುವ ಕಾಲ ಕಾಣೆಯಾಗತೊಡಗಿತ್ತು. ದೇಶದುದ್ದಕ್ಕೂ ಸಮಾಜವಾದಿ ತಾತ್ವಿಕ, ಸಂಘಟಕ, ಚುನಾವಣಾ ಪ್ರಚಾರಕ, ಸಂಸ್ಕೃತಿ ಸಂಶೋಧಕ ಎಲ್ಲವೂ ಆಗಿ ಲೋಹಿಯಾ ಅಡ್ಡಾಡುತ್ತಿದ್ದರು. ಬಸ್ಸು, ರೈಲು, ಕಾರು, ಎತ್ತಿನ ಗಾಡಿ... ಹೀಗೆ ಸಿಕ್ಕ ಸಿಕ್ಕ ವಾಹನಗಳಲ್ಲಿ ಅವರು ಓಡಾಡಬೇಕಾಗುತ್ತಿತ್ತು. ಇದೆಲ್ಲದರಿಂದಾಗಿ ಲೋಹಿಯಾ ದೇಹ ಶಿಥಿಲವಾಗುತ್ತಿತ್ತು. ರಮಾಗೆ ಬರೆದ ಪತ್ರದಲ್ಲಿ ಈ ಸ್ಥಿತಿಯ ವಿವರಗಳು:



ಪ್ರಿಯ ಇಲ್ಲಿ,

ನೀನಿಲ್ಲಿಂದ ಹೋದ ಮೇಲೆ ನನ್ನ ಎರಡು ಹಲ್ಲು ಬಿದ್ದುಹೋದವು. ನಾಲ್ಕು ತಾಸುಗಳ ಹಿಂದೆ ಒಂದನ್ನು ಎಳೆದು ತೆಗೆದೆ. ಅದು ಏಳನೆಯದು. ಮುಪ್ಪು ಬರುತ್ತಾ ಇದೆ. ಶರೀರ ಹಿಂದಿನ ಹಾಗೆ ಸಹಕರಿಸುತ್ತಾ ಇಲ್ಲ. ನೀನು ಚಿಂತಿಸಬೇಡ. ಸುಮ್ಮನೆ ತಾತ್ವಿಕವಾಗಿ ಹೇಳುತ್ತಿದ್ದೇನೆ– ಬಹುಶಃ ನಿನ್ನ ಅನುಕಂಪ ಪಡೆಯಲು. ನಿನಗೆ ತಿಳಿದಿರುವುದಕ್ಕಿಂತ ಹೆಚ್ಚು ದುರ್ಬಲನಾಗಿಲ್ಲ. ನಕಲಿ ಹಲ್ಲುಗಳನ್ನು ಇಟ್ಟುಕೊಂಡಿದ್ದರೂ ನನಗೆ ಅವು ಇಷ್ಟವಿಲ್ಲ. ಇನ್ನು ನಕಲಿ ಹಲ್ಲುಗಳನ್ನು ಇಟ್ಟುಕೊಳ್ಳಲೇಬೇಕಾಗುತ್ತದೆ. ಎಲ್ಲವೂ ಮೇಲಿನ ದವಡೆಯವು.

ಮನುಷ್ಯ ಹೇಗೆ ಮುದುಕನಾಗುತ್ತಾನೆ? ಜೀವನದ ವಿಫಲತೆಗೂ ಮುಪ್ಪಿಗೂ ಸಂಬಂಧವೇನಾದರೂ ಇದೆಯೆ? ಇತರರಿಗೆ ನಾನೊಬ್ಬ ವಿಫಲ ಮನುಷ್ಯ ಅನ್ನಿಸಿದರೂ, ಜೀವನದಲ್ಲಿ ನಾನು ವಿಫಲನೆಂದು ನನಗನಿಸುವುದಿಲ್ಲ. ಆದರೆ ಜನರ ಅನಿಸಿಕೆ ರಾಜಕಾರಣಿಗಳ ಮೇಲೆ ಸಾಮಾನ್ಯವಾಗಿ ಪರಿಣಾಮ ಮಾಡುತ್ತದೆ. ರಾಜಕೀಯ ವೃತ್ತಿಯ ಕೆಟ್ಟ ಅಂಶ ಇದು. ನಾನು ಈ ದೇಶದಲ್ಲೇ ಎಲ್ಲರಿಗಿಂತ ಹೆಚ್ಚು ಮಾನಸಿಕ ಸಮತೋಲನ ಪಡೆದುಕೊಂಡಿದ್ದೇನೆಂದು ನಂಬುತ್ತೇನೆ. ಆದರೂ ಬೇರೆಯವರ ಅಭಿಪ್ರಾಯ ನಮ್ಮ ಮೇಲೆ ಪ್ರಭಾವ ಬೀರುತ್ತದೆ.’

ಈ ನಡುವೆ ತಾವು ಮಾಡುತ್ತಿರುವ ಸಾಂಸ್ಕೃತಿಕ ಕೆಲಸಗಳ ಬಗೆಗೆ ಲೋಹಿಯಾರಲ್ಲಿ ಸಾರ್ಥಕ ಭಾವ ಮೂಡತೊಡಗುತ್ತದೆ. ಭಾರತ, ನೇಪಾಳಗಳ ಹತ್ತಾರು ಬಗೆಯ ರಾಮಾಯಣಗಳನ್ನು ಮಂಡಿಸಿ, ಭಾರತದ ಬಹುಸಂಸ್ಕೃತಿಯನ್ನು ಸಾರಲು ಚಿತ್ರಕೂಟದಲ್ಲಿ ಅವರು ಸಂಘಟಿಸಿದ ‘ರಾಮಾಯಣ ಮೇಳ’ ಯಶಸ್ವಿಯಾಗುತ್ತದೆ. ದೇಶದಲ್ಲಿ ಎಲ್ಲವೂ ಕೆಟ್ಟಿಲ್ಲ ಎನ್ನಿಸತೊಡಗುತ್ತದೆ. ಗಂಭೀರ ಬರವಣಿಗೆ ಅವರಲ್ಲಿ ಹೊಸ ಎನರ್ಜಿ ಚಿಮ್ಮಿಸತೊಡಗುತ್ತದೆ. ತಮ್ಮ ‘ಸೌಂದರ್ಯ ಮತ್ತು ಮೈಬಣ್ಣ’ ಲೇಖನ ಕಪ್ಪು ಬಣ್ಣದ ಬಗ್ಗೆ ಜಗತ್ತಿನ ಜನರಲ್ಲಿ ಇರುವ ಕೀಳರಿಮೆಯನ್ನು ತೊಡೆಯುವ ಕ್ರಾಂತಿಕಾರಕ ನೋಟವನ್ನು ಮಂಡಿಸಿದಾಗ ಸಣ್ಣಗೆ ಹೆಮ್ಮೆಯುಂಟಾಗುತ್ತದೆ. ‘ಮ್ಯಾನ್‌ಕೈಂಡ್’ ಬರಹಗಳು, ‘ಗಿಲ್ಟಿ ಮೆನ್ ಆಫ್ ಇಂಡಿಯಾಸ್ ಪಾರ್ಟಿಶನ್’ ಥರದ ಪುಸ್ತಕಗಳು ಬಂದಾಗ ತಮ್ಮ ಹೊಸ ಚಿಂತನೆಗಳು ಸಂಚಲನ ಮೂಡಿಸಬಲ್ಲವೆಂಬ ವಿಶ್ವಾಸ ಮೂಡುತ್ತದೆ.

ಹಾಗೆಯೇ, ಜಾತಿವಿನಾಶ ಸಮ್ಮೇಳನದ ಪರಿಣಾಮಗಳ ಬಗ್ಗೆ ಆಶಾವಾದ ಮೂಡತೊಡಗುತ್ತದೆ. ರಾಜಕೀಯ ಬದಲಾವಣೆಯಿಂದ ದೇಶ ಬದಲಾಗಬಹುದೆಂಬ ಆಸೆ ಗರಿಗೆದರುತ್ತದೆ: ‘ಸಂಸತ್ತಿನ ಚುನಾವಣೆಗೆ ನಾವು 200 ಮಂದಿಯನ್ನು ತಯಾರು ಮಾಡಬಹುದೆಂದು ಕಾಣುತ್ತದೆ. ಗುಜರಾತ್, ಮುಂಬಯಿಯಲ್ಲಿ ಸ್ವಲ್ಪ ಕಡಿಮೆ. ಚುನಾವಣೆಯ ಆಸೆ ಆಕಾಂಕ್ಷೆಗಳು ನಮ್ಮ ಸದಸ್ಯರಲ್ಲಿ ಹುಮ್ಮಸ್ಸನ್ನು ಹೆಚ್ಚಿಸಿವೆ. ಬಿಹಾರದಲ್ಲಿಯೂ ಈ ಉತ್ಸಾಹ ಜೋರಿನಲ್ಲಿದೆ. ಎಂಥ ವಿಚಿತ್ರ! ಮನುಷ್ಯ ಅತಿ ನಿರೀಕ್ಷೆ ಮಾಡುವ ಮತಿಹೀನನಾದರೂ ವಿಚಿತ್ರ ರೀತಿಯ ಭರವಸೆಯಲ್ಲಿ ಬದುಕುತ್ತಾನೆ! ಈ ಭರವಸೆ ಮತ್ತು ಅದರ ಜೊತೆ ಹುಟ್ಟುವ ಪ್ರಯತ್ನ ಸ್ಥಿರವಾಗಿದ್ದಿದ್ದರೆ...!’

ಸಮಾಜವಾದಿ ರಾಜಕಾರಣ ಹಿಂದುಳಿದ ಜಾತಿಗಳಲ್ಲಿ ಬಿತ್ತಿದ ಜಾಗೃತಿಯಿಂದಾಗಿ ದೇಶದ ಹಲವೆಡೆ ಹೊಸ ಎಚ್ಚರ ಮೂಡತೊಡಗುತ್ತದೆ: ‘ಬಿಹಾರದ ಸಭೆಗಳ ಸರಾಸರಿ ನೋಡಿದರೆ ಸುಮಾರು ನಾಲ್ಕು ಸಾವಿರ ಜನ ಪ್ರತಿ ಸಭೆಯಲ್ಲಿದ್ದರು; ಜಾತಿ ಕುರಿತಂತೆ ನಮ್ಮ ನಿಲುವಿನ ಪರಿಣಾಮ ಸಹರ್ಸಾ ಜಿಲ್ಲೆಯ ಹಿಂದುಳಿದ ವರ್ಗಗಳ ಮೇಲೆ ಸ್ವಲ್ಪ ಆಗಿದೆ. ಎಲ್ಲಾ ಕಡೆಯಲ್ಲಿ ಏನೋ ಆಗಲಿರುವ ಸೂಚನೆ ಇದೆ. ಪರಿಣಾಮ ಮಾತ್ರ ನಮಗೆ ತಿಳಿಯುತ್ತಿಲ್ಲ.’

ಹೀಗೆ ‘ಬಹಳಷ್ಟು ಸಂಖ್ಯೆಯ ಜನ ನಮ್ಮ ವಿಚಾರಗಳನ್ನು ಕುರಿತು ಯೋಚಿಸಲು ಹಾಗೂ ಮಾತಾಡಲು ಕಲಿಯುತ್ತಿದ್ದಾರೆ’ ಎಂಬುದನ್ನು ಕಂಡು ಲೋಹಿಯಾಗೆ ಆಶಾವಾದ ಮೂಡುತ್ತದೆ. ಸತ್ಯಾಗ್ರಹದಲ್ಲಿ ಎಂಟು, ಹತ್ತು ಸಾವಿರ ಜನ ಬಂಧನಕ್ಕೊಳಗಾದಾಗ ಎಲ್ಲೋ ಹೋರಾಟ ಮುಂದುವರಿಯುತ್ತಿದೆಯೆಂಬ ವಿಶ್ವಾಸ ಹುಟ್ಟುತ್ತದೆ.

ಆದರೆ ಇಂಥ ಸತ್ಯಾಗ್ರಹಗಳ ವರದಿಯನ್ನೇ ಪತ್ರಿಕೆಗಳು ಪ್ರಕಟಿಸದಿರುವುದನ್ನು ಕಂಡು ಲೋಹಿಯಾಗೆ ರೇಗುತ್ತದೆ. ಹಿಂಸೆ ಅಥವಾ ಗೋಲಿಬಾರ್ ನಡೆಯದಿದ್ದರೆ ಪತ್ರಿಕೆಗಳು ಅದನ್ನು ವರದಿ ಮಾಡದಿರುವುದು ಕಾರ್ಯಕರ್ತರಲ್ಲೂ ನಿರಾಶೆ ಹುಟ್ಟಿಸುತ್ತದೆ. ‘ಇಲ್ಲಿ ಎಲ್ಲ ಕೆಲಸವೂ ಕೇವಲ ಸಾಂಕೇತಿಕ ಪ್ರದರ್ಶನವಾಗಿ ಕೊನೆಗೊಳ್ಳುತ್ತದಲ್ಲ!’ ಎಂದು ಲೋಹಿಯಾಗೆ ಭ್ರಮನಿರಸನವಾಗತೊಡಗುತ್ತದೆ. ‘ಹಣವಿಲ್ಲ, ಸದಸ್ಯತ್ವ ಹೆಚ್ಚುತ್ತಿಲ್ಲ, ಕಾರ್ಯಕರ್ತರು ಬರುತ್ತಿಲ್ಲ. ನಮ್ಮ ಚುನಾವಣೆಯ ಲಾಭಗಳನ್ನು ಶಾಂತಚಿತ್ತದಿಂದ ನೋಡಿದಾಗಲೆಲ್ಲ, ಪ್ರತಿಫಲವಿಲ್ಲದ ಕರ್ತವ್ಯದ ಈ ನೀತಿ ಕುರಿತು ಚಿಂತಿಸಬೇಕಾಗುತ್ತದೆ’ ಎಂಬ ವಾಸ್ತವ ಎದುರಾಗುತ್ತದೆ.

ಬಿಡುವಿಲ್ಲದ ಓಡಾಟದಲ್ಲಿ ಲೋಹಿಯಾ ಆರೋಗ್ಯ ಕೆಟ್ಟು, ಆಗಾಗ ಅವರ ಕಿವಿ